# ಹಿಪ್ಪಲಿ ಬೇಕು ಹಿತ್ತಲಲ್ಲಿ!

■ ಚಿತ್ರ– ಬರಹ:
ಗೀತಸದಾ ಮೋಂತಿಮಾರು



ನೀರು ಬಸಿದು ಹೋಗುವ ಫಲವತ್ತಾದ ಗೋಡುಮಣ್ಣಿನಲ್ಲಿ ಚೆನ್ನಾಗಿ ಬೆಳೆಯುವ ಹಿಪ್ಪಲಿಯನ್ನು ಹಿತ್ತಲಲ್ಲಿ ಬಹಳ ಸುಲಭವಾಗಿ ಬೆಳೆಸಬಹುದು. ಇದೊಂದು ಬಹೂಪಯೋಗಿ ಔಷಧೀಯ ಸಸ್ಯ. ಇದನ್ನು ಇಂಗ್ಲಿಷ್‌ನಲ್ಲಿ ಲಾಂಗ್‌ಪೆಪ್ಪರ್ ಎನ್ನುತ್ತಾರೆ. ವೈಜ್ಞಾನಿಕ ಹೆಸರು ಪೈಪರ್ ಲಾಂಗಮ್; ಪೈಪರೇಸಿ ಕುಟುಂಬಕ್ಕೆ ಸೇರಿದೆ. ಸಂಸ್ಕೃತದಲ್ಲಿ ಪಿಪ್ಪಲಿ ಎನ್ನುತ್ತಾರೆ.

ಬಹುವಾರ್ಷಿಕ ಔಷಧಿ ಸಸ್ಯವಾದ ಹಿಪ್ಪಲಿಯು ತೆವಳು ಬಳ್ಳಿಯಾಗಿದೆ. ಇದರ ಕಾಂಡವು ಬಳ್ಳಿಯಂತೆ ನೀಳವಾಗಿದ್ದು ನೆಲದ ಮೇಲೆ ಹರಡಿ ಅಥವಾ ಇತರ ಸಸ್ಯಗಳಿಗೆ ಸುತ್ತಿ ಬೆಳೆಯುತ್ತದೆ. ಕಾಳು ಮೆಣಸಿನ (ಪೆಪ್ಪರ್) ಬಳ್ಳಿಯಂತೆ ಇದನ್ನೂ ತೆಂಗಿನ ಮರಕ್ಕೆ ಅಥವಾ ಇತರ ಯಾವುದೇ ಸಸ್ಯಗಳಿಗೆ ಹಬ್ಬಿಸಿ ಬೆಳೆಸಬಹುದು. ಗಿಡದ ಬುಡದಲ್ಲಿ ನೀರು ನಿಲ್ಲದಂತೆ ನೋಡಿಕೊಂಡರೆ ಸಾಕು. ರೋಗ, ಕೀಟಗಳ ಬಾಧೆ ಕಡಿಮೆ ಇರುವ ಈ ಸಸ್ಯಕ್ಕೆ ಕೊಟ್ಟಿಗೆ ಗೊಬ್ಬರ, ಬೂದಿಯ ಆರೈಕೆ ಸಾಕು.

ಸಾಮಾನ್ಯವಾಗಿ ವರ್ಷವಿಡೀ ಕಾಯಿ ಬಿಡುವ ಈ ಸಸ್ಯದಲ್ಲಿ ಡಿಸೆಂಬರ್ ತಿಂಗಳ ನಂತರ ಹೆಚ್ಚು ಕಾಯಿಕಚ್ಚಲು ಪ್ರಾರಂಭವಾಗುತ್ತದೆ. ಇದರ ಎಳೆಯ ಕಾಯಿಗಳು ಹಸಿರು ಬಣ್ಣದಿಂದ ಕೂಡಿದ್ದು ಬೆಳೆದಂತೆ ಹಸಿರುಮಿಶ್ರಿತ ಕಪ್ಪು ಬಣ್ಣವನ್ನು ಹೊಂದಿ ನಂತರ ಕೆಂಪು ಬಣ್ಣದಿಂದ ಹಣ್ಣಾಗುತ್ತದೆ. ಇದರ ಕಾಯಿಗಳು ಸುಮಾರು ಎರಡು ಇಂಚು ಉದ್ದ ಇರುತ್ತವೆ.

ಹಣ್ಣಾದ ಹಿಪ್ಪಲಿಯನಒಣಗಿಸಿ ಬಹಳ ಕಾಲದವರೆಗೆ ಕೆಡದಂತೆ ಇಡಬಹುದು. ಒಣಗಿದ ಹಿಪ್ಪಲಿಯು ಹಲವು ಔಷಧೀಯ ಗುಣಗಳನ್ನು ಹೊಂದಿವೆ.

## ಉಪಯೋಗಗಳು

★ ನೆಗಡಿ, ಕೆಮ್ಮು, ಗಂಟಲು ನೋವಿಗೆ ಹಿಪ್ಪಲಿಯ ಹಾಲುಕಷಾಯದ ಸೇವನೆ ಅಥವಾ ಒಂದು ಚಮಚ ಹಿಪ್ಪಲಿ ಪುಡಿಯನ್ನು ಜೇನು ತುಪ್ಪದೊಂದಿಗೆ ದಿನಕ್ಕೆರಡು ಬಾರಿ ಸೇವನೆ ಬಹಳ ಉಪಯೋಗ.

★ ಹಿಪ್ಪಲಿ ಪುಡಿಯನ್ನು ಎಳ್ಳೆಣ್ಣೆಯಲ್ಲಿ ಬೆರೆಸಿ ತಯಾರಿಸಿದ ತೈಲವನ್ನು ಸಂಧಿವಾತದ ನೋವಿರುವ ಜಾಗಕ್ಕೆ ಹಚ್ಚಿ ಮಸಾಜ್ ಮಾಡುವುದರಿಂದ ಶಮನ.

★ ಜೇನು ತುಪ್ಪದೊಡನೆ ಹಿಪ್ಪಲಿ ಪುಡಿಯನ್ನು ಸೇವಿಸುವುದರಿಂದ ರಕ್ತಹೀನತೆ ಪರಿಹಾರವಾಗುವುದಲ್ಲದೆ ರೋಗನಿರೋಧಕ ಶಕ್ತಿ ವೃದ್ಧಿಸಿ ದೇಹ ಸಶಕ್ತವಾಗುವುದು.

★ ಜಜ್ಜಿದ ಕಾಳುಮೆಣಸು, ಹಿಪ್ಪಲಿ ಮತ್ತು ಶುಂಠಿ ಸೇರಿಸಿ ತಯಾರಿಸಿದ ಕಷಾಯದ ಸೇವನೆಯಿಂದ ಶೀತದಿಂದ ತಲೆಭಾರ ಮತ್ತು ಗಂಟಲು ನೋವಿನಿಂದ ಸ್ವರ ಬಿದ್ದು ಹೋಗಿದ್ದರೆ ಪರಿಹಾರ.

★ ಅಜೀರ್ಣ, ಹೊಟ್ಟೆಉಬ್ಬರ ಇತ್ಯಾದಿ ತೊಂದರೆಗಳಾದಲ್ಲಿ ಹಿಪ್ಪಲಿ, ಶುಂಠಿ ಮತ್ತು ಕಾಳುಮೆಣಸು ಇವುಗಳ ಪುಡಿಯನ್ನು ಸಮಪ್ರಮಾಣದಲ್ಲಿ ಮಜ್ಜಿಗೆಯಲ್ಲಿ ಕರಗಿಸಿ ಸೇವಿಸುವುದು ಒಳ್ಳೆಯದು.

ಮಳೆಗಾಲದ ಪ್ರಾರಂಭದಲ್ಲಿ ಬೀಜ, ಕಂದುಗಳು, ಬೇರುಬಿಟ್ಟ ಬಳ್ಳಿಯ ತುಂಡುಗಳಿಂದ ಅಥವಾ ಬಲಿತ ಕೊಂಬೆಗಳ ಕಸಿಕಟ್ಟುವಿಕೆಯಿಂದಲೂ ಹಿಪ್ಪಲಿಯ ಸಸ್ಯಾಭಿವೃದ್ಧಿ ಮಾಡಬಹುದು. ಹೂವಿನ ತೋಟದಲ್ಲಿ, ಕುಂಡಗಳಲ್ಲಿ ಆಧಾರ ನೀಡಿ, ತೂಗು ಕುಂಡಗಳಲ್ಲಿ ಅಥವಾ ಮನೆಯೊಳಗೆ ಅಲಂಕಾರಿಕ ಸಸ್ಯವಾಗಿಯೂ ಬೆಳೆಸಬಹುದು. ದಿನಾ ನೀರಿನ ಅಗತ್ಯವಿಲ್ಲದ ಈ ಬಳ್ಳಿಗೆ ಇತರ ಗಿಡಗಳ ಜೊತೆ ನೀರು ಹನಿಸಿದರೂ ಸಾಕು. ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇರುವ ಈ ಲಾಂಗ್‌ಪೆಪ್ಪರನ್ನು ಔಷಧಿ ಅಂಗಡಿಗಳಲ್ಲಿ ಹೆಚ್ಚಾಗಿ ಖರೀದಿಸುತ್ತಾರೆ. ●